ಮಾಳೇಟಿರ ಸುಬ್ಬಯ್ಯ! ಆ ದಿನ ಹೋಟೆಲಿನಲ್ಲಿದ್ದ ಎಲ್ಲಾ ಅತಿಥಿಗಳ ವಿವರಗಳನ್ನೂ ತರಿಸಿಕೊಂಡೆ. ಒಬ್ಬನ ಹೆಸರು ನನ್ನ ಗುಮಾನಿಯನ್ನು ದೃಢಪಡಿಸಿತು. ಮಾಳೇಟಿರ ಮಾರ್ಕ್! ಆತನ ಪಾಸ್‌ಪೋರ್ಟ್ ಪ್ರತಿಯೂ ಹೋಟೆಲಲ್ಲಿ ಲಭ್ಯವಿತ್ತು. ಆತನ ತಂದೆಯ ಹೆಸರು ಮಾಳೇಟಿರ ಬೋಪಯ್ಯ. ಈ ವಿವರಗಳೆಲ್ಲಾ ಮೊನ್ನೆಯಷ್ಟೇ ನನ್ಗೆ ಲಭ್ಯವಾಗಿತ್ತು. ಆದ್ರೆ ನಾನು ಮೊಟೀವ್ ಬಗ್ಗೆ ತಲೆ ಕೆಡಿಸಿಕೊಳ್ತಾ ಇದ್ದೆ. ನಿನ್ನೆ ಎಲ್ಲಾ ಬಗೆಹರೀತು. ಇವತ್ತು ನಾನು ಗ್ರೀನ್ ಲ್ಯಾಂಡ್ ಎಸ್ಟೇಟಿಗೆ ದಾಳಿ ಇಡುವ ಯೋಚನೆಯಲ್ಲಿಯೇ ಇದ್ದೆ. ಸುಭಾಷಿಣಿಗೆ ನಿನ್ನೆ ರಾತ್ರಿ ಸುಬ್ಬಯ್ಯ ಸಿಕ್ಕಿದ್ದರಿಂದ ನನ್ನ ಲೆಕ್ಕಾಚಾರವೆಲ್ಲವೂ ಸರಿಯೆಂಬುದು ಸಿದ್ಧವಾಯಿತಷ್ಟೆ."

"ನಮ್ಮವರ ಗಡಿಯಾರ ಸುಬ್ಬಯ್ಯನ ಕೈಯಲ್ಲಿ ಹೇಗೆ ಬಂದಿತು?"

"ಪ್ರಾಯಶಃ ಅದು ಮಾರ್ಕ್ ತನ್ನ ಅಜ್ಜನಿಗೆ ಕಳಿಸಿದ ಉಡುಗೊರೆಯಾಗಿರ್ಬೇಕು. ಹೈದರಾಬಾದಿಗೆ ರಚನ್ ಹೋಗುವಾಗ ಆ ವಾಚ್ ಇರಬೇಕಲ್ವೆ? ಅದ್ಕೆ ಪರೇಶ್ ರಚನ್‌ಗೆ ಅಂತಹದೇ ಕೈಗಡಿಯಾರ ನೀಡಿರಬೇಕು."

"ಇದನ್ನೆಲ್ಲಾ ಪರೇಶ್ ಯಾಕ್ ಮಾಡ್ದ?"

"ಅದೇ ನನ್ ತಲೆ ಕೊರಿತಾ ಇದ್ದ ವಿಚಾರ. ಮೊಮ್ಮಗನು ಅಜ್ಜನನ್ನು ಭೇಟಿಯಾಗಬಾರದು ಯಾಕೆ? ಭೇಟಿಯಾದ್ರೆ ಮೊಮ್ಮಗ ಏನಾದ್ರೂ ಕೇಳಿದ್ರೆ ಅಜ್ಜ ಸತ್ಯ ಹೇಳಿಬಿಡ್ತಾನಲ್ವೆ? ಅಂದ್ರೆ ಮೊಮ್ಮಗನಿಂದ ಮುಚ್ಚಿಡುವ ವಿಚಾರವೇನಾದ್ರೂ ಇರಲೇಬೇಕಲ್ವೆ? ಏನಿರಬಹುದು? ಖಂಡಿತಾ ಅದು ಹಣದ ವಿಚಾರ ಇರಲೇಬೇಕು! ಮುದುಕನ ವ್ಯವಹಾರ ಎಲ್ಲಾ ಪರೇಶ್ ನೋಡಿಕೊಳ್ಳೋದು ಅಂತ ಆ ಟೆಕ್ನಿಷಿಯನ್ ಹೇಳ್ದ. ಪ್ರಾಯಶಃ ಮೊಮ್ಮಗ ಅಜ್ಜನಿಗೆ ಹಣ ಕಳಿಸ್ತಿರಬೇಕು. ಅದನ್ನು ಪರೇಶ್ ನುಂಗ್ತಾ ಇರಬೇಕು! ನನ್ಗೆ ಪ್ರಿಂಟರ್ ವಿತರಕರು ಪರೇಶ್‌ನ

